14. ನೆಮ್ಮಾರ್	ಚಿಕ್ಕಮಗಳೂರು ಶೃಂಗೇರಿ	12.33	41	2.48
15. ಬೊಮ್ಮಾಲಾಪುರ	ಚಿಕ್ಕಮಗಳೂರು ಕೊಪ್ಪ	12.80	45	2.26
16. ಬಂಡಿಗಾಡಿ	ಚಿಕ್ಕಮಗಳೂರು ಕೊಪ್ಪ	18.18	67	3.12
17. ಕರಮರಗುಂಡಿ	ದಕ್ಷಿಣ ಕನ್ನಡ ಬಂಟ್ವಾಳ	28.50	124	0.54
18. ಹುಚ್ಚನಕೊಪ್ಪಲು	ಹಾಸನ ಹೊಳೆನರಸೀಪುರ	–	–	0.22 (ಈ ಯೋಜನೆಯನ್ನು ಸಣ್ಣ ನೀರಾವರಿ ವಲಯಕ್ಕೆ ಫೆಬ್ರವರಿ 90ರಲ್ಲಿ ವರ್ಗಾಯಿಸಲಾಗಿದೆ)
	ಒಟ್ಟು:	838	3242	98.29

ಕುಮುದ್ವತಿ ನದಿಗೆ ಕಟ್ಟಲಾಗುವ ಬ್ಯಾರೇಜ್ ಅಡ್ಡಗೋಡೆಯ ಕೆಲಸದ ಪ್ರಗತಿ

457 (81): ಶ್ರೀ ಕೆ.ಬಿ. ಕೋಳಿವಾಡ (ರಾಣೇಬೆನ್ನೂರು):–

ಸಣ್ಣ ನೀರಾವರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೇಬೆನ್ನೂರು ತಾಲ್ಲೂಕು ಕುಮುದ್ವತಿ ನದಿಗೆ ಕಟ್ಟುವ ಲಿಂಗದಹಳ್ಳಿ ಬ್ಯಾರೇಜ್, ನಿಟ್ಟೂರ್ ಬ್ಯಾರೇಜ್, ಚಿಕ್ಕಮಾಗನೂರು ಹಾಗೂ ಹಿರೇಮಾಗನೂರು ಬ್ಯಾರೇಜ್ ಅಡ್ಡಗೋಡೆ ಯಾವ ಹಂತದಲ್ಲಿವೆ;

ಆ) ಸದರಿ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರು ಮತ್ತು ತಾಂತ್ರಿಕ ಒಪ್ಪಿಗೆ ಕೊಡಲಾಗಿದೆಯೇ;

ಇ) ಹಾಗಿದ್ದಲ್ಲಿ ಮುಂಬರುವ 1993–94ರ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗುವುದು ?

ಡಾ।। ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯಮಂತ್ರಿ):–

ಅ) ಲಿಂಗದಹಳ್ಳಿ ಬ್ಯಾರೇಜ್: ಈ ಯೋಜನೆಯು ಡಿಪಿಎಪಿ ಅಡಿಯಲ್ಲಿ 1986–87ನೇ ಸಾಲಿನಲ್ಲಿ 24.96 ಲಕ್ಷ ರೂ.ಗಳಿಗೆ ಮಂಜೂರಾತಿ ಹೊಂದಿದ್ದು ಜಿಲ್ಲಾ ಪರಿಷತ್ ವತಿಯಿಂದ ಕಾಂಕ್ರೀಟ್ ಕೆಲಸ ನಡೆದಿದ್ದು ಇದುವರೆಗೆ 9.44 ಲಕ್ಷ ರೂ.ಗಳು ವೆಚ್ಚವಾಗಿದೆ. 5.00 ಲಕ್ಷ ರೂ.ಗಳ ಮೊತ್ತ ಮೀನಿರುವ ಕಾಮಗಾರಿಗಳಿಗೆ ಅನುದಾನವನ್ನು ನಿಲ್ಲಿಸಿರುವುದರಿಂದ ಕೆಲಸವು ಸ್ಥಗಿತಗೊಂಡಿದೆ. ಉಳಿಕೆ ಕೆಲಸ ಮುಗಿಸಲು 30.00 ಲಕ್ಷ ರೂ.ಗಳು ಬೇಕಾಗುವುದು.

ನಿಟ್ಟೂರು ಬ್ಯಾರೇಜ್:– ಈ ಯೋಜನೆಗೆ 48.38 ಲಕ್ಷರೂ.ಗಳ ಅಂದಾಜು ತಯಾರಾಗಿದ್ದು ಇದರಿಂದ 208 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಿದೆ. ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. 92–93ನೇ ಆಯವ್ಯಯ ಪಟ್ಟಿಯಲ್ಲಿ 17.00 ಲಕ್ಷ ರೂ. ಅನುದಾನ ಸೇರಿದೆ.

ಆ) ಚಿಕ್ಕಮಾಗನೂರು ಮತ್ತು ಹಿರೇಮಾಗನೂರು ಬ್ಯಾರೇಜ್:

ಈ ಕಾಮಗಾರಿಯು ಯಾವ ಅನುಮೋದಿತ ಕಾರ್ಯಕ್ರಮದಲ್ಲಿಯೂ ಸೇರಿರುವುದಿಲ್ಲ. ಇದರ ಅಂದಾಜು ಪಟ್ಟಿ ತಯಾರಿಸಬೇಕಾಗಿದೆ.

ಲಿಂಗದಹಳ್ಳಿ ಬ್ಯಾರೇಜ್‌ಗೆ ಮಾತ್ರ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಒಪ್ಪಿಗೆ ದೊರೆತಿದೆ. ಉಳಿದ ಬ್ಯಾರೇಜ್‌ಗಳಿಗೆ ಮಂಜೂರಾತಿ ದೊರೆತಿಲ್ಲ.

ಇ) ಲಿಂಗದಹಳ್ಳಿ ಬ್ಯಾರೇಜ್‌ಗೆ ಆಧ್ಯತೆ ಮೇಲೆ ಪರಿಶೀಲಿಸಲಾಗುವುದು.

ನಿಟ್ಟೂರು ಬ್ಯಾರೇಜ್‌ಗೆ 93–94ನೇ ಸಾಲಿನಲ್ಲಿ 18.00 ಲಕ್ಷ ರೂ. ಅನುದಾನ ಒದಗಿಸಿದೆ.

ಚಿಕ್ಕಮಾಗನೂರು ಮತ್ತು ಹಿರೇಮಾಗನೂರು ಇದು ತಾಂತ್ರಿಕ ಮತ್ತು ಆರ್ಥಿಕ ಶಕ್ಯವಿದ್ದಲ್ಲಿ ಹಣದ ಲಭ್ಯತೆ ಮೇರೆಗೆ ಪರಿಶೀಲಿಸಲಾಗುವುದು. 93–94ನೇ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಸಿದ್ದಾಪುರ – ಹಳ್ಳಿಹೊಳೆ – ಮುದೂರು - ಜಡ್ಕಲ್ ರಸ್ತೆ ಅಭಿವೃದ್ಧಿ

459 (155): ಶ್ರೀ ಜಿ.ಎಸ್. ಆಚಾರ್ (ಬೈಂದೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಸಿದ್ದಾಪುರ – ಹಳ್ಳಿಹೊಳೆ – ಮುದೂರು – ಜಡ್ಕಲ್ ರಸ್ತೆಯ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆ ಯಾವ ಕ್ರಮ ಕೈಗೊಂಡಿದೆ;

ಆ) ತಾಲ್ಲೂಕಿನ ಅತ್ಯಂತ ಹಿಂದುಳಿದ ಭಾಗದಲ್ಲಿ ಹಾದುಹೋಗುವ ಈ ರಸ್ತೆಯ ಸಂಪೂರ್ಣ ಅಭಿವೃದ್ಧಿಗೆ ಎಷ್ಟು ವೆಚ್ಚ ಹಾಗೂ ಸಮಯ ತಗಲುವುದು;

ಇ) ರಸ್ತೆಯ ಮಹತ್ವದ ದೃಷ್ಟಿಯಿಂದ ಅದಕ್ಕೆ ಆದ್ಯತೆ ನೀಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ಆ ರಸ್ತೆಯ ಅತಿ ಆಗತ್ಯವಿರುವ ಕಾಮಗಾರಿಗಳಾದ 34.50ನೇ ಕಿ.ಮೀ.ನಲ್ಲಿ ಒಂದು ಸೇತುವೆ ನಿರ್ಮಾಣ ಹಾಗೂ 3 ಕಿ.ಮೀ.ಉದ್ದಕ್ಕೆ ಜಲ್ಲಿ ಹಾಕಿ ಡಾಂಬರು ಮಾಡುವ ಮತ್ತು ವಿಶೇಷ ದುರಸ್ತಿ, ವಾರ್ಷಿಕ ನಿರ್ವಹಣೆ ಇವುಗಳನ್ನು ಒಟ್ಟು 13.03 ಲಕ್ಷದ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಆ ರಸ್ತೆಯ ಸರ್ವತೋಮುಖ ಅಭಿವೃದ್ಧಿ ಅಂದರೆ ರಸ್ತೆಯನ್ನು ಸಂಪೂರ್ಣವಾಗಿ ಜಲ್ಲಿ ಪದರ ಒದಗಿಸಿ ಡಾಂಬರು ಮಾಡುವುದು ಮತ್ತು ಮೋರಿಗಳ ನಿರ್ಮಾಣ ಇತ್ಯಾದಿಗಳನ್ನು ಕೈಗೊಳ್ಳಲು ಒಟ್ಟು ರೂ. 120.00 ಲಕ್ಷ ಬೇಕಾಗಬಹುದು. ಅನುದಾನ ಪೂರ್ಣ ದೊರೆತಲ್ಲಿ ಸುಮಾರು 3 ವರ್ಷಗಳ ಕಾಲಾವಧಿ ಬೇಕಾಗುತ್ತದೆ.

ಇ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿನ ಈ ರಸ್ತೆಯನ್ನು ಇತ್ತೀಚೆಗೆ ಮೇಲ್ದರ್ಜೆಗೇರಿಸಿ